# ಕರ್ಮ



ಒಳ್ಳೆಯ ಕರ್ಮ ಮಾಡಿದರೆ ಒಳ್ಳೆಯ ಫಲ, ಕೆಟ್ಟ ಕರ್ಮ ಮಾಡಿದರೆ ಕೆಟ್ಟ ಫಲ. ಮೆಣಸಿನಕಾಯಿ ತಿಂದರೆ ಖಾರ ಹತ್ತಿಕೊಳ್ಳುವುದಿಲ್ಲವೆ? ಇವೆಲ್ಲಾ ಭಗವಂತನ ಲೀಲೆ, ಕ್ರೀಡೆ.

ಯಾವಾಗ ಹರಿನಾಮ, ರಾಮನಾಮ ಇವುಗಳನ್ನು ಕೇಳಿದೊಡನೆಯೆ ಕಣ್ಣಿನಿಂದ ನೀರು ಸುರಿಯುವುದೋ, ಆವಾಗ ಸಂಧ್ಯಾವಂದನೆ ಮೊದಲಾದ ಕ್ರಿಯೆಗಳ ಆವಶ್ಯಕತೆ ಯೇನೂ ಇರದು. ಎಲ್ಲಾ ಕರ್ಮಗಳೂ ಆತನನ್ನು ತಾವಾಗಿಯೇ ಬಿಟ್ಟು ಹೋಗುತ್ತವೆ. ಕರ್ಮಫಲ ಹತ್ತಿರ ಕೂಡ ಸುಳಿಯುವುದಿಲ್ಲ.

ತಮಃಪ್ರಧಾನ ಭಕ್ತಿಯನ್ನು ಆರೋಪಿಸಿಕೊ. ಜೋರಿನಿಂದ ಹೇಳು: 'ಏನು? ನಾನು ರಾಮನಾಮ ಪಠಿಸಿದ್ದೇನೆ, ಕಾಳೀನಾಮ ಪಠಿಸಿದ್ದೇನೆ, ನನಗೆಲ್ಲಿಯ ಬಂಧನ? ನನಗೆಲ್ಲಿಯ ಕರ್ಮಫಲ?'

ಕರ್ಮವು ತಾನಾಗಿಯೇ ಬಿದ್ದುಹೋಗಬೇಕು. ಹೃದಯದಲ್ಲಿ ತೀವ್ರ ಭಗವತ್ಪ್ರೇಮವು ಜಾಗೃತವಾಯಿತೆಂದರೆ ಕರ್ಮತ್ಯಾಗವು ತಾನಾಗಿಯೇ ಬಂದುಬಿಡುತ್ತದೆ. ಆದರೆ ಅದಕ್ಕೆ ಮೊದಲೇ ಒತ್ತಾಯಪೂರ್ವಕವಾಗಿ ಕರ್ಮವನ್ನು ತ್ಯಾಗ ಮಾಡಕೂಡದು. ಗಾಯವು ಗುಣವಾಗುತ್ತಿರುವಾಗ ಹೊಟ್ಟಿನ ಒಂದು ಪದರ ಉಂಟಾಗುತ್ತದೆ. ಗಾಯ ವಾಸಿಯಾದಮೇಲೆ ಆ ಪದರ ತಾನಾಗಿಯೇ ಬಿದ್ದುಹೋಗುತ್ತದೆ. ನಾವು ಮೊದಲೇ ಅದನ್ನು ಕಿತ್ತರೆ ಗಾಯ ಕೆರಳುತ್ತದೆ.

ಸೊಸೆ ಗರ್ಭಿಣಿಯಾದಾಗ ಅತ್ತೆಯು ಅವಳ ಕೆಲಸಗಳನ್ನು ಕಡಿಮೆ ಮಾಡುತ್ತಾ ಬರುತ್ತಾಳೆ. ಮಗು ಹುಟ್ಟಿದಮೇಲಂತೂ ಆಕೆ ಏನೂ ಕೆಲಸ ಮಾಡಬೇಕಾಗಿಲ್ಲ—ಕೇವಲ ಮಗುವನ್ನು ನೋಡಿಕೊಳ್ಳುವುದೊಂದೇ ಕೆಲಸ. ಹಾಗೆಯೇ ನಾವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದಂತೆಲ್ಲ ದೇವರು ನಮ್ಮ ಕೆಲಸವನ್ನು ಕಡಿಮೆ ಮಾಡುತ್ತಾ ಬರುತ್ತಾನೆ. ಭಗವತ್ಸಾಕ್ಷಾತ್ಕಾರವಾದಮೇಲೆ ಕೇವಲ ಭಗವಂತನೊಡನೆ ರಮಿಸುವುದೊಂದೇ ಕೆಲಸ. ಆಗ ಪ್ರಾಪಂಚಿಕ ಕರ್ತವ್ಯಗಳೆಲ್ಲ ತಾವಾಗಿಯೇ ಬಿದ್ದುಹೋಗುತ್ತವೆ.

ಆದರೆ ಅಲ್ಲಿಯವರೆಗೆ ಶ್ರೀಮಂತನ ಮನೆಯಲ್ಲಿ ಕೆಲಸದಾಕೆಯು ಕರ್ಮ ಮಾಡುವಂತೆ ಸಾಧಕನು ಕರ್ಮದಲ್ಲಿ ನಿರತನಾಗಿರಬೇಕು. ಕೆಲಸದಾಕೆ ಅಲ್ಲಿ ಕೆಲಸಗಳನ್ನು ನಿಷ್ಠೆಯಿಂದ ಮಾಡುತ್ತಾಳೆ, ಶ್ರೀಮಂತನ ಮನೆಯ ಮಕ್ಕಳನ್ನು 'ನನ್ನ ರಾಮ, ನನ್ನ ಗೋಪಾಲ' ಎಂದು ಆಡಿಸುತ್ತಾಳೆ. ಆದರೆ ಅವಳಿಗೆ ಹೃದಯಾಂತರಾಳದಲ್ಲಿ ಗೊತ್ತಿದೆ, ಇದಾವುದೂ ತನ್ನದಲ್ಲ, ತನ್ನ ಮನೆ ಮಕ್ಕಳು ಇರುವುದು ಹಳ್ಳಿಯಲ್ಲಿ ಎಂದು.

ಒಂದು ಕೈಯಲ್ಲಿ ಭಗವಂತನ ಪಾದಪದ್ಮವನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ನಿಮ್ಮ ಕರ್ತವ್ಯಗಳನ್ನು ಮಾಡಿ. ಕೆಲಸ ಮುಗಿದ ನಂತರ ಎರಡೂ ಕೈಗಳಿಂದ ಭಗವಂತನ ಪಾದಪದ್ಮಗಳನ್ನು ಹಿಡಿಯಿರಿ.

ಗೃಹಸ್ಥರಿಗೇ ಆಗಲಿ ಅಥವಾ ಅನ್ಯ ಆಶ್ರಮಿಗಳಿಗೇ ಆಗಲಿ, ನಿಷ್ಕಾಮಕರ್ಮ ಮಾಡಲು ಸಾಧ್ಯವಾಗುವುದಾದರೆ ಆಗ ಅವರಿಗೆ ಕರ್ಮದ ಮೂಲಕ ಯೋಗವುಂಟಾಗುತ್ತದೆ.

ಕರ್ಮವನ್ನು ಸಂಪೂರ್ಣವಾಗಿ ತ್ಯಜಿಸಲು ಸಾಧ್ಯವಿಲ್ಲ. ನಿನ್ನ ಸ್ವಭಾವವೇ ನಿನ್ನನ್ನು ಕೆಲಸದಲ್ಲಿ ತೊಡಗಿಸಿಬಿಡುತ್ತದೆ—ನಿನಗೆ ಇಚ್ಛೆ ಇರಲಿ ಬಿಡಲಿ. ಈ ಕಾರಣದಿಂದಲೇ ಶಾಸ್ತ್ರ ಹೇಳುತ್ತದೆ, ಅನಾಸಕ್ತರಾಗಿ ಕೆಲಸ ಮಾಡಿ—ಅಂದರೆ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಿ ಅಂತ. ಉದಾರಹಣೆಗೆ ನೀನು ಪೂಜೆ, ಜಪತಪಾದಿಗಳನ್ನು ಮಾಡುತ್ತಿದ್ದೀಯೆ, ಆದರೆ ಲೋಕಮಾನ್ಯನಾಗಬೇಕೆಂದಾಗಲಿ ಅಥವಾ ಪುಣ್ಯ ಕಟ್ಟಿಕೊಳ್ಳಬೇಕೆಂದಾಗಲಿ ಮಾಡುತ್ತಿಲ್ಲ. ಈ ರೀತಿಯಾಗಿ ಅನಾಸಕ್ತಿಯಿಂದ ಕೆಲಸ ಮಾಡುವುದಕ್ಕೆ ಕರ್ಮಯೋಗವೆಂದು ಹೆಸರು.

ಜೀವನದ ಉದ್ದೇಶ ಭಗವಂತನ ಸಾಕ್ಷಾತ್ಕಾರ. ಕರ್ಮ ಆದಿಕಾಂಡ. ಅದು ಜೀವನದ ಉದ್ದೇಶವಾಗಲಾರದು. ಆದರೆ ನಿಷ್ಕಾಮ ಕರ್ಮ ಒಂದು ಮಾರ್ಗವೇ ವಿನಾ ಉದ್ದೇಶವಲ್ಲ.

ಕರ್ಮದ ಮೂಲಕ ಭಗವಂತನಲ್ಲಿ ಮನಸ್ಸನ್ನಿಡಬೇಕು. ಅನಾಸಕ್ತಿಯಿಂದ ಪ್ರಾಣಾಯಾಮ, ಧ್ಯಾನ ಧಾರಣಾದಿಗಳನ್ನು ಮಾಡಿದರೆ ಅದು ಕರ್ಮಯೋಗವಾಗಿಬಿಡುತ್ತದೆ. ಸಂಸಾರಿ ಅನಾಸಕ್ತನಾಗಿ ಭಗವಂತನಿಗೆ ಫಲ ಸಮರ್ಪಣೆ ಮಾಡಿ ಆತನಲ್ಲಿ ಭಕ್ತಿಯಿಟ್ಟು, ಸಾಂಸಾರಿಕ ಕರ್ಮಗಳನ್ನು ಮಾಡಿದ್ದೇ ಆದರೆ, ಅದೂ ಕರ್ಮಯೋಗವಾಗಿಬಿಡುತ್ತದೆ. ಭಗವಂತನ ಸಾಕ್ಷಾತ್ಕಾರವೇ ಕರ್ಮಯೋಗದ ಲಕ್ಷ್ಯ.

ಯಾರು ಗೃಹಸ್ಥರೊ ಅವರು ಆತನೊಡನೆ ಐಕ್ಯವಾಗುವುದು ಕರ್ಮದ ಮೂಲಕ. ಸಂನ್ಯಾಸಿಗಳು ಕಾಮ್ಯಕರ್ಮಗಳನ್ನು ತ್ಯಜಿಸಬೇಕು. ಆದರೆ ನಿತ್ಯಕರ್ಮಗಳನ್ನು ಕಾಮನಾಶೂನ್ಯರಾಗಿ ಮಾಡಬೇಕು.

ಮಾಡುವ ಕೆಲಸ ಯಾವುದಾದರೂ ಸರಿಯೆ, ಫಲಾಕಾಂಕ್ಷೆ ತ್ಯಜಿಸಿ ಕಾಮನಾಶೂನ್ಯರಾಗಿ ಮಾಡಿದರೆ ಆತನೊಡನೆ ಐಕ್ಯತೆ ದೊರೆಯುತ್ತದೆ.

*ಶ್ರೀರಾಮಕೃಷ್ಣ ವಚನವೇದ* ದಿಂದ